## ಕಣ್ಮರೆಯಾದ ಫ್ಲೋರಿಕಾನ್

ಮೈಸೂರು ನಗರದೊಳಗಿನ ಒಂದು ಉದಾಹರಣೆಯನ್ನೇ ಗಮನಿಸಿ: ಚಾಮುಂಡಿ ಬೆಟ್ಟದಲ್ಲಿ ಅತಿ ವಿಶೇಷವಾದ ಪಕ್ಷಿ ಪ್ರಭೇದವೊಂದಿತ್ತು. ಅದನ್ನು ಫ್ಲೋರಿಕಾನ್ ಎಂದು ಕರೆಯುತ್ತಾರೆ. ವಿಸ್ತಾರವಾಗಿದ್ದ ಹುಲ್ಲಿನ ಬಯಲುಗಳಲ್ಲಿ ಅಡಗಿ ಕುಳಿತು ನಡು ನಡುವೆ ಕಾರಂಜಿಯಂತೆ ಪುಟಿದು ಹುಲ್ಲಿನಲ್ಲಿ ಲೀನವಾಗುತ್ತಿದ್ದ ಇವು ಇಂದಿಲ್ಲ. 1890ರ ನಂತರ, ಈ ಪಕ್ಷಿಗಳ ವಾಸಸ್ಥಾನವನ್ನು ಮಾನವ ಅತಿಕ್ರಮಿಸಿಕೊಂಡ ಕಾರಣ, ಈ ಪಕ್ಷಿಗಳು ಇಲ್ಲಿಂದ ಕಣ್ಮರೆಯಾಗಿ ಹೋದವು. ಮತ್ತೆಂದಿಗೂ ಈ ಪರಿಸರವನ್ನು ಪುನರ್‌ಸೃಷ್ಟಿ ಮಾಡಲಾಗದ ಸಂದಿಗ್ಧ ಪರಿಸ್ಥಿತಿಯನ್ನು ನಾವು ನಿರ್ಮಿಸಿದ್ದೇವೆ.

### ನಮ್ಮಲ್ಲಿ ಏನಾಗುತ್ತಿದೆ?

ಈಗ ನಮ್ಮಲ್ಲಿ ಆಗುತ್ತಿರುವುದೇನು.. ಎಂಬುದು ಪ್ರಶ್ನೆ. ಭಾರತದಲ್ಲಿ ಹುಲಿ ಎನ್ನುವುದೇ ಹೆಗ್ಗಳಿಕೆಯ ವಿಚಾರವಲ್ಲವೇ. ಕೇವಲ ಹುಲಿಯಿಂದಲೇ ನಮ್ಮ ದೇಶಕ್ಕೆ ವಾರ್ಷಿಕ 1 ಸಾವಿರ ಕೋಟಿ ರೂಪಾಯಿ ಆದಾಯ ಬರುತ್ತಿದೆ. ಈ ಆದಾಯವು ಯಾವುದೇ ರೀತಿಯ ವೈಜ್ಞಾನಿಕ ನಿರ್ವಹಣೆಯಿಲ್ಲದೇ, ಪ್ರಾಣಿಯ ಮೇಲೆ ಪ್ರೀತಿ ಇಲ್ಲದೇ, ಅದನ್ನು ಕೇವಲ ಆದಾಯದ ಮೂಲವೆಂದೇ ನೋಡುತ್ತಿರುವ ಸಂದರ್ಭದಲ್ಲಿ. ಇನ್ನು ಕೋಸ್ಟರಿಕಾ, ಅಮೆರಿಕ, ಯೂರೋಪಿಯನ್ ರಾಷ್ಟ್ರಗಳಂತೆ ನಾವೂ ಹೆಜ್ಜೆ ಇಟ್ಟುಬಿಟ್ಟರೆ ಈ ಆದಾಯ ಎಷ್ಟಾಗಬಹುದು? ಈ ಬಗ್ಗೆ ನಾವು ಕಣ್ಣು ತೆರೆಯಬೇಕಿದೆ.

ಹುಲಿ ಪ್ರವಾಸೋದ್ಯಮ: ಹುಲಿ ನೋಡುವುದೇ ಪ್ರವಾಸಿಗರಲ್ಲಿ ಹೆಗ್ಗಳಿಕೆಯ ವಿಚಾರವಾಗಿಬಿಟ್ಟಿದೆ. ಈ ಹುಲಿಗಳನ್ನು ಬಳಸಿಕೊಂಡು, ಅವನ್ನು ಪೋಷಿಸಿ, ಅವುಗಳಿಗೆ ಉತ್ತಮ ಪರಿಸರವನ್ನು ಸೃಷ್ಟಿಸಿ, ಅವುಗಳ ವಾಸಸ್ಥಾನವನ್ನು ಹಾಳಾಗದಂತೆ ನೋಡಿಕೊಂಡರೆ ನಮ್ಮ ಪ್ರವಾಸೋದ್ಯಮದ ಸ್ಥಿತಿ ನಿಜಕ್ಕೂ ಇನ್ನಷ್ಟು ಸುಧಾರಿಸಲಿದೆ. ನಮ್ಮ ಬಗ್ಗೆ ನಾವು ಈಗ ಏನು ಹೇಳಿಕೊಳ್ಳಬೇಕಿದೆ ಎಂದರೆ, 'ಭಾರತದಲ್ಲಿ ಈಗ ಎಲ್ಲವೂ ಇದೆ; ಆದರೆ, ಏನೂ ಇಲ್ಲ'. ಎಲ್ಲ ಜೀವಿಗಳನ್ನು ಗೌರವಿಸಿ, ಅವನ್ನು ಬದುಕಲು ಬಿಟ್ಟರೆ ನಾವೂ ಬದುಕಬಹುದು. ಇದೇ ನಾಗರಿಕತೆ, ಇದೇ ಸಂಸ್ಕೃತಿ ಎಂಬುದು ನಮ್ಮ ಮಂತ್ರವಾಗಬೇಕಿದೆ.

ನಮ್ಮಲ್ಲಿ ಹುಲಿ ಸಮೀಕ್ಷೆ ನಡೆದಿದೆಯೇ ಹೊರತು, ಈ ಹುಲಿಗಳ ಮೌಲ್ಯ ಎಷ್ಟು ಎಂಬುದರ ಬಗ್ಗೆ ಯಾರಾದರೂ ತಲೆ ಕೆಡಿಸಿಕೊಂಡಿದ್ದಾರೆಯೇ? ಟಾನ್ಜಾನಿಯಾ, ಕೀನ್ಯಾದಲ್ಲಿ ಆದಂತೆ, ನಮ್ಮಲ್ಲೂ ಹುಲಿಗಳ ಮೌಲ್ಯವನ್ನು ಈ ದಿಕ್ಕಿನಲ್ಲಿ ಅಂದಾಜಿಸಬೇಕಿದೆ. ನಮ್ಮಲ್ಲಿ ಆಗುತ್ತಿರುವ ದುರಂತವೆಂದರೆ, ರಾಜ್ಯಕ್ಕೆ ಎಕ್ಸ್‌ಪ್ರೆಸ್ ಹೈವೇಗಳನ್ನು ನಿರ್ಮಿಸುವುದು. ಈ ಕೆಲಸದಲ್ಲಿ ಅದೆಷ್ಟೊ ಸಾವಿರ ಎಕರೆ ಹುಲಿ ಸಂರಕ್ಷಿತ ಅರಣ್ಯಗಳನ್ನೇ ನಾಶ ಮಾಡಲಾಗುತ್ತಿದೆ. ಅದು ಒಮ್ಮೆ ನಾಶವಾದರೆ ಮತ್ತೆಂದೂ ಪುನರ್ ನಿರ್ಮಿಸಲು ಸಾಧ್ಯವಾಗದ ಅರಣ್ಯ. ರಸ್ತೆಗಳನ್ನು ವಿಸ್ತರಿಸಿ, ಉದ್ಯಮಗಳನ್ನು ಸೃಷ್ಟಿಸಿ ದೇಶದ ಬಡತನವನ್ನು ಹೋಗಲಾಡಿಸುವ ಕನಸು ನಮ್ಮ ಆಳುವ ವರ್ಗದ್ದು. ಆದರೆ, ಉದ್ಯಮಗಳು ಪ್ರಪಂಚದ ಬೇಡಿಕೆಗಳಿಗೆ ಅನುಗುಣವಾಗಿ ಹೆಜ್ಜೆಯಿಡುತ್ತವೆ. ಇದು ಇತಿಹಾಸದುದ್ದಕ್ಕೂ ಇರುವ ಉದಾಹರಣೆ. ಹಣ ಗಳಿಸುವ ಅವಸರದ ಹಾದಿಗಳು ಎಂದಿಗೂ ಅಪಾಯ. ಅವು ಎಂದಿಗೂ ನಮ್ಮ ಸಮಾಜವನ್ನು ಕಟ್ಟಲು ನೆರವಾಗುವುದಿಲ್ಲ. ಬದಲಾಗಿ, ದುರಾಸೆ, ಆಡಂಬರಗಳಿಗೆ ಪ್ರಚೋದಿಸಬಹುದು.

ಇನ್ನು, 'ಈ ಪರಿಸರ ಟೂರಿಸಂ, ಸಫಾರಿ ಇವೆಲ್ಲಾ ಶ್ರೀಮಂತರಿಗೆ ಮಾತ್ರ' ಎಂದು ಸಾಮಾನ್ಯವಾಗಿ ಹೇಳುವುದುಂಟು. ಅದನ್ನು ಅಲ್ಲಗಳೆಯಲು ಆಗುವುದಿಲ್ಲ. ಆದರೆ, ಪರಿಸರ ಟೂರಿಸಂ ಅನ್ನು ನಾವು ನೋಡಬೇಕಾದ ದೃಷ್ಟಿಕೋನವೇ ಬದಲಾಗಬೇಕಿದೆ. ಈಗಿನಂತೆ ಅರಣ್ಯದಲ್ಲಿ ರೆಸಾರ್ಟ್‌ಗಳನ್ನು ಕಟ್ಟಿಸಿ, ಅದರ ಆದಾಯವನ್ನು ರೆಸಾರ್ಟ್ ಮಾಲೀಕ ಹಾಗೂ ಸರ್ಕಾರ ಹಂಚಿಕೊಳ್ಳುವುದಲ್ಲ. ಬದಲಿಗೆ, ಇಡೀ ಪರಿಸರ ಟೂರಿಸಂ ಸ್ಥಳೀಯ ಉದ್ಯಮವಾಗಿ ಬೆಳೆಯಬೇಕು. ಆಯಾ ಅರಣ್ಯ ಭಾಗದಲ್ಲಿರುವ ಗ್ರಾಮಸ್ಥರು, ಗಿರಿಜನರು, ಅಲ್ಲಿನ ಪಂಚಾಯಿತಿಗಳಿಗೆ ಆದಾಯ ಹೋಗಬೇಕು. ಆಗ ಪರಿಸರ ಟೂರಿಸಂಗೆ ಸ್ಥಳೀಯರ ಬೆಂಬಲ ಸಿಗುತ್ತದೆ. ಸ್ಥಳೀಯರಿಗೆ ಉದ್ಯೋಗ ಸಿಗುವಂತಾದರೆ, ಸರ್ಕಾರಗಳ ಮೇಲೆ ಜನತೆ ಅವಲಂಬಿತವಾಗುವುದು ತಪ್ಪುತ್ತದೆ. ಬರುವ ಆದಾಯದಿಂದ ಹಳ್ಳಿಗಳಲ್ಲಿ ಮೂಲಸೌಕರ್ಯ ಹೆಚ್ಚಿದರೆ, ಶ್ರೀಮಂತಿಕೆ ಬರಲಾರಂಭಿಸಿದರೆ, ಅದಕ್ಕಿಂತ ಜನರಿಗೆ ಇನ್ನೇನು ಬೇಕು?

ಇಲ್ಲೊಂದು ವಿಚಾರ ಹೇಳಲೇಬೇಕು. ಅಭಿವೃದ್ಧಿ ಎಂಬ ನಮ್ಮ ಪರಿಕಲ್ಪನೆ ಎಷ್ಟು ಹಳಸಲಾಗಿದೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಒಂದೆಡೆ ಬೃಹತ್ ಕೈಗಾರಿಕೆಗಳು ಬೇಕು; ಹೆದ್ದಾರಿಗಳು ನಿರ್ಮಾಣವಾಗಬೇಕು.

